ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 07–7–2015

## ಪತ್ರಿಕಾ ಪ್ರಕಟಣೆ

# ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಮೊತ್ತ ಏರಿಕೆ

ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರವು ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ ಪುರಸ್ಕೃತರಿಗೆ ನೀಡುತ್ತಿರುವ ಮಾಸಿಕ ಗೌರವ ಧನ ರೂ. 2,000/– ಗಳಿಗೆ ಬದಲಾಗಿ ರಾಜ್ಯಮಟ್ಟದ ಇತರೆ ಪ್ರಶಸ್ತಿಗಳಂತೆ 3.00 ಲಕ್ಷ (ರೂ. ಮೂರು ಲಕ್ಷಗಳು ಮಾತ್ರ) ಗಳನ್ನು ಒಟ್ಟು ಇಡಿಗಂಟಾಗಿ ಮಂಜೂರು ಮಾಡಲು ಆದೇಶಿಸಿದೆ.

ಪಲ್ಲವಿ/ಬಾಬು/ಕೆಎಂ

# ಅವಧಿ ವಿಸ್ತರಣೆ

ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)

2015–16 ನೇ ಸಾಲಿಗೆ ಆಡಳಿತ ನ್ಯಾಯಾಧಿಕರಣ ಯೋಜನೆಯಲ್ಲಿ ಪರಿಶಿಷ್ಟ ಜಾತಿ/ವರ್ಗದ ಕಾನೂನು ಪದವಿಧರರಿಗೆ ತರಬೇತಿ ನೀಡುವ ಕುರಿತಂತೆ ಅರ್ಜಿ ಸಲ್ಲಿಸಲು ಇದ್ದ ಕೊನೆಯ ದಿನಾಂಕವನ್ನು ಜುಲೈ 31 ರವರೆಗೆ ವಿಸ್ತರಿಸಲಾಗಿದೆ.

ಪಲ್ಲವಿ/ಬಾಬು/ಕೆಎಂ

# ಚೇತನ – ಮರು ನಾಮಕರಣ

ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)

2015–16 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಲೈಂಗಿಕ ಕಾರ್ಯಕರ್ತೆಯರ ಪುನರ್ವಸತಿ ಯೋಜನೆ ಎಂಬ ಹೆಸರನ್ನು "ಚೇತನ" ಎಂದು ಮರು ನಾಮಕರಣ ಮಾಡಿ, 1000 ಕಾರ್ಯಕರ್ತೆಯರಿಗೆ ಆರ್ಥಿಕ ಸೌಲಭ್ಯವನ್ನು ಬ್ಯಾಂಕಿನಿಂದ ನೀಡುವ ಬದಲಾಗಿ ನೇರವಾಗಿ ಪ್ರೋತ್ಸಾಹ ಧನದ ರೂಪದಲ್ಲಿ ತಲಾ 20,000 ರೂ. ಗಳನ್ನು ಸರ್ಕಾರದಿಂದ ಅನುಮೋದಿತ ಸಂಘ ಸಂಸ್ಥೆಗಳಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಫಲಾನುಭವಿಗಳಿಗೆ ನೀಡಲು ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಪಲ್ಲವಿ/ಬಾಬು:ಜಿಪಿಆರ್.

# ಸಾರಿಗೆ ಅದಾಲತ್

ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)

ಬೆಂಗಳೂರು ಕೋರಮಂಗಲದಲ್ಲಿರುವ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಜುಲೈ 8 ರಂದು ಮಧ್ಯಾಹ್ನ 3-00 ಗಂಟೆಗೆ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ.

ಸಾರ್ವಜನಿಕರು ಈ ಕಚೇರಿ ವ್ಯಾಪ್ತಿಯಲ್ಲಿರುವ ಸಾರಿಗೆ ಸೇವೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಅದಾಲತ್‌ನಲ್ಲಿ ಪರಿಹರಿಸಿಕೊಳ್ಳಬಹುದಾಗಿದೆ.

ಪಲ್ಲವಿ/ಬಾಬು:ಜಿಪಿಆರ್.

# ಡಿಪ್ಲೋಮಾ ಇನ್ ಸಿನೆಮಾಟೊಗ್ರಫಿ, ಸೌಂಡ್ ರೆಕಾರ್ಡಿಂಗ್: ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)

ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ವತಿಯಿಂದ 2015-16 ನೇ ಸಾಲಿನ ಡಿಪ್ಲೊಮಾ ಇನ್ ಸಿನೆಮಾಟೊಗ್ರಫಿ ಮತ್ತು ಡಿಪ್ಲೊಮಾ ಇನ್ ಸೌಂಡ್ ರೆಕಾರ್ಡಿಂಗ್ ಅಂಡ್ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ನೀಡುವ ಮತ್ತು ಸ್ವೀಕರಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ.

ಸರ್ಕಾರಿ ಆದೇಶದ ಪ್ರಕಾರ ಹೊರ ರಾಜ್ಯದ ಅಭ್ಯರ್ಥಿಗಳಿಗೆ ಶೇ 50 ರಷ್ಟು ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಗಳು ಕರ್ನಾಟಕ ದ್ವಿತೀಯ ಪಿ.ಯು.ಸಿ. ವಿಜ್ಞಾನ (ಪಿ.ಸಿ.ಎಂ. ವಿಷಯಗಳಲ್ಲಿ) ಅಥವಾ ತತ್ಸಮಾನ ಹಾಗೂ ಹೊರ ರಾಜ್ಯಗಳ ಅಭ್ಯರ್ಥಿಗಳು 10 + 2 (ಪಿ.ಸಿ.ಎಂ. ವಿಷಯಗಳಲ್ಲಿ) ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಒಟ್ಟಾರೆಯಾಗಿ ಶೇ 35 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು.

ಅರ್ಜಿಗಳನ್ನು ಪ್ರಾಂಶುಪಾಲರ ಕಚೇರಿ, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ ಅಂಚೆ, ಬೆಂಗಳೂರು – 88, ಇಲ್ಲಿಂದ ರೂ 300/- (ಎಸ್‌ಸಿ/ಎಸ್‌ಟಿ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳು ರೂ 250/-) ಗಳನ್ನು ಪಾವತಿಸಿ ಖುದ್ದಾಗಿ ಪಡೆಯಬಹುದು.

ಅರ್ಜಿಗಳನ್ನು ನೀಡುವ ಹಾಗೂ ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು ಜುಲೈ 20 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 080-28466768, 28446672, ಅಥವಾ ವೆಬ್‌ಸೈಟ್ web: www.filminstitutebangalore.com ಅನ್ನು ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

## ಕಿರುಚಿತ್ರ ನಿರ್ಮಾಣಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಜುಲೈ** 7 (**ಕರ್ನಾಟಕ ವಾರ್ತೆ**)

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ) ಕಛೇರಿಯ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗವು ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಹಾಗೂ ಆಪ್ತ ಸಲಹಾ ಕೇಂದ್ರಗಳ ಬಗ್ಗೆ 1 ಘಂಟೆ ಅವಧಿಯ ಕಿರುಚಿತ್ರ ತಯಾರಿಸಲು ನಿರ್ಧರಿಸಿದ್ದು ಆಸಕ್ತರು 10 ದಿನಗಳ ಒಳಗಾಗಿ ದರಪಟ್ಟಿ ಸಹಿತ ತಮ್ಮ ಪ್ರಸ್ತಾವನೆಯನ್ನು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ನಿರ್ದೇಶಕರು ಇವಿಜಿ ವಿಭಾಗ ಡಿ.ಎಸ್.ಇ.ಆರ್.ಟಿ ಇವರನ್ನು ದೂ.ಸಂ– 080–26422374 ರಲ್ಲಿ ಸಂಪರ್ಕಿಸುವುದು.

**ಪಲ್ಲವಿ:ಬಾಬು:ಜಿಪಿಆರ್.**

## ನ್ಯಾಯಾಲಯ ಮತ್ತು ಕಾರಾಗೃಹಗಳ ನಡುವೆ ಉನ್ನತ ಗುಣಮಟ್ಟದ ವಿಡಿಯೋ ಸಮಾವೇಶದ ಉದ್ಘಾಟನಾ ಸಮಾರಂಭ

ಕರ್ನಾಟಕ ಉಚ್ಛ ನ್ಯಾಯಾಲಯದ ಗೌರವಾನ್ವಿತ ಹಂಗಾಮಿ **ಮುಖ್ಯ ನ್ಯಾಯಾಧೀಶರಾದ ಶ್ರೀ ಸುಭ್ರೋ ಕಮಲ್ ಮುಖರ್ಜಿ** ರವರು ದಿನಾಂಕ: 07.07.2015 ರಂದು ಅಪರಾಹ್ನ 4.45 ಗಂಟೆಗೆ ಉಚ್ಛ ನ್ಯಾಯಾಲಯದ ಆವರಣದಲ್ಲಿ ನ್ಯಾಯಾಲಯ ಮತ್ತು ಕಾರಾಗೃಹಗಳಿಗೆ ಸಂಪರ್ಕ ಕಲ್ಪಿಸುವ **ಉನ್ನತ ಗುಣಮಟ್ಟದ ಪ್ರಾಯೋಗಿಕ ವಿಡಿಯೋ ಸಮಾವೇಶ**ವನ್ನು ಉದ್ಘಾಟಿಸಿದ್ದಾರೆ. **ಡಿಜಿಟಲ್ ಇಂಡಿಯಾ** ಸಪ್ತಾಹದ ಅಂಗವಾಗಿ ಈ ಪ್ರಾಯೋಗಿಕ ಅನಾವರಣವನ್ನು ಮಾಡಲಾಗಿದೆ. ಈ ಪ್ರಾಯೋಗಿಕ ಅನಾವರಣದಲ್ಲಿ 2 ನ್ಯಾಯಾಲಯಗಳು:- CCH-57 ಸಿಟಿ ಸಿವಿಲ್ ನ್ಯಾಯಾಲಯ ಬೆಂಗಳೂರು ಮತ್ತು 1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಮಂಗಳೂರು ಹಾಗು 6 ಜಿಲ್ಲಾ ಮಟ್ಟದ ಕಾರಾಗೃಹಗಳು:- ಮೈಸೂರು, ದಾರವಾಢ, ಕಲ್ಬುರ್ಗಿ, ಬೆಳಗಾವಿ, ವಿಜಯಪುರ ಮತ್ತು ಬಳ್ಳಾರಿ ಇವುಗಳಿಗೆ ವಿಡಿಯೋ ಸಂಪರ್ಕ ನೀಡಲಾಗಿದೆ.

ಈ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ ನ್ಯಾಯಾಲಯ ಮತ್ತು ಕಾರಾಗೃಹಗಳಿಗೆ ಉನ್ನತ ಗುಣಮಟ್ಟದ ವಿಡಿಯೋ ಸಮಾವೇಶದ ಅನುಕೂಲವನ್ನು ಕಲ್ಪಿಸಲಾಗುವುದು. ಅಪರಾಧಿ ನ್ಯಾಯ ನಿರ್ಣಯ ಪದ್ಧತಿಯಲ್ಲಿ ತ್ವರಿತವಾಗಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಅನುಕೂಲ ಕಲ್ಪಿಸಿ ಈ

ಯೋಜನೆಯು ಒಂದು ಕ್ರಾಂತಿಯನ್ನ ಮಾಡಲಿದೆ. ವಿಡಿಯೋ ಸಮಾವೇಶದ ಅನುಕೂಲವನ್ನು ನ್ಯಾಯಾಲಯದ ಆವರಣದಲ್ಲೇ ಕಲ್ಪಿಸುವುದರಿಂದ ವಿಚಾರಣಾಧೀನ ಖೈದಿಗಳು ಭೌತಿಕವಾಗಿ ನ್ಯಾಯಾಲಯಗಳಿಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ. ಇದರಿಂದಾಗಿ ನ್ಯಾಯಾಲಯಕ್ಕೆ ವಿಚಾರಣಾಧೀನ ಖೈದಿಗಳನ್ನು ಹಾಜರುಪಡಿಸುವ ವೆಚ್ಚವು ಕಡಿಮೆಯಾಗಲಿದೆ. ವಿಚಾರಣಾಧೀನ ಖೈದಿಗಳನ್ನು ಹಾಜರುಪಡಿಸುವ ಸಲುವಾಗಿ ನಿಯೋಜಿಸುವ ಸಿಬ್ಬಂದಿಗಳ ಸಂಖ್ಯೆಯು ಕಡಿಮೆಯಿದ್ದು, ಪ್ರಕರಣದ ವಿಲೇವಾರಿ ವಿಳಂಬವಾಗುತ್ತಿದೆ. ಈ ವಿಡಿಯೋ ಸಮಾವೇಶದಿಂದ ಇಂತಹ ವಿಳಂಬಗಳು ಪರಿಣಾಮಕಾರಿಯಾಗಿ ಇಳಿಮುಖವಾಗಲಿದೆ. ವಿಚಾರಣಾಧೀನ ಖೈದಿಗಳು ನ್ಯಾಯಾಲಯಕ್ಕೆ ಹಾಜರಾಗಲು ಆಗಮಿಸುವಾಗ ತಪ್ಪಿಸಿಕೊಂಡು ಹೋಗುವ ಪ್ರಕರಣಗಳು ಈ ವಿಡಿಯೋ ಸಮಾವೇಶದ ಅನುಕೂಲದಿಂದಾಗಿ ಸ್ಥಗಿತಗೊಳ್ಳಲಿದೆ.

ಸಮಾರಂಭದಲ್ಲಿ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರು ಇ-ಆಡಳಿತ ಇಲಾಖೆ ಮತ್ತು ಕಾರಾಗೃಹ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## Inauguration of High definition Video Conferencing facility between Courts & Jails.

Hon'ble Acting Chief Justice of Karnataka High Court Mr. Justice Subhro Kamal Mukherjee has inaugurated the pilot High definition Video Conference between Courts and Jails. This pilot launch is done as part of Digital India week. The pilot launch includes 2 courts namely CCH-57 City Civil Court and 1st Additional Court Bangalore and district court, Mangalore and 6 District Jails namely, Mysuru, Dharwad, Kalburgi, Belgavi, Vijayapura and Bellary.

The project is to provide High Definition VC facility to all the Jails and Courts in the state of Karnataka. The project is going to make a revolution in criminal justice system for speedy disposal of the cases. The Video conferencing system will be provided within the Court hall itself, so that the under trails need not be physically produced in the Courts. It reduces the expenditure of transport of under trails with escort. There is significant delay in physical production of under

trails in courts due to shortage of escort personnel. The VC facility will enable to reduce the delay significantly. Video Conferencing facility also eliminate the risk of escape of the under trails during their transportation to Courts.

All the Hon'ble judges of High Court of Karnataka & Senior Officers of e-Governance & Prisons Department participated in the programme.